


ಸಂಕೀರ್ಣತೆಯಿಂದಾಗಿ ಅವರನ್ನು ಸಿನಿಮಾವಸ್ತುವಿಗೆ ಒಗ್ಗಿಸುವುದು ಯಾವ ನಿರ್ದೇಶಕನಿಗಾದರೂ ಸವಾಲು. ರಿಚರ್ಡ್ ಅಟೆನ್‌ಬರೊ ಅವರ 'ಗಾಂಧಿ' ಚಿತ್ರವನ್ನು ಹೊರತುಪಡಿಸಿದರೆ, ಗಾಂಧಿ ಅವರ ಜೀವನಗಾಥೆಯನ್ನು ಹೇಳುವ ಮತ್ತೊಂದು ಉದಾಹರಣೆ ಇದ್ದಂತಿಲ್ಲ. ಶ್ಯಾಮ್ ಬೆನಗಲ್‌ರ 'ಮೇಕಿಂಗ್ ಆಫ್ ಮಹಾತ್ಮ' ಕೂಡ ಗಮನಾರ್ಹ ಸಿನಿಮಾ.

ಗಾಂಧಿಯನ್ನು ಇಡಿಯಾಗಿ ಹಿಡಿಯಲು ಹಂಬಲಿಸಿದ ಪ್ರಯತ್ನಗಳು ಅತಿ ವಿರಳವಾದರೂ, ಗಾಂಧಿ ಛಾಯೆಯನ್ನು ಬಳಸಿಕೊಂಡು ಅನೇಕ ಚಿತ್ರಗಳು ರೂಪುಗೊಂಡಿವೆ. ರಾಜ್‌ಕುಮಾರ್ ಹಿರಾನಿ ನಿರ್ದೇಶನದ 'ಲಗೆ ರಹೋ ಮುನ್ನಾಭಾಯಿ', 'ಮುನ್ನಾಭಾಯಿ ಎಂಬಿಬಿಎಸ್' ಸಿನಿಮಾಗಳು ಬಾಲಿವುಡ್‌ನಲ್ಲಿ 'ಗಾಂಧಿಗಿರಿ' ಎನ್ನುವ ಜನಪ್ರಿಯ ಪರಿಕಲ್ಪನೆಯನ್ನೇ ಚಾಲ್ತಿಗೆ ತಂದವು. ಕಮಲ್ ಹಾಸನ್ ಅವರ 'ಹೇ ರಾಮ್' ಕೂಡ ಗಾಂಧಿ ಛಾಯೆಯನ್ನೊಳಗೊಂಡು ಮತ್ತೊಂದು ಜನಪ್ರಿಯ ಸಿನಿಮಾ.

ಕನ್ನಡದಲ್ಲಿ ಕೂಡ ಗಾಂಧಿ ಬಿಂಬಗಳನ್ನೊಳಗೊಂಡು ಕೆಲವು ಚಿತ್ರಗಳು ರೂಪುಗೊಂಡಿವೆ. ಈ ಸಿನಿಮಾಗಳಿಗೆ ಮುನ್ನ 'ಮಹಾತ್ಮ' ಸಂಸ್ಥೆಯನ್ನು ನೆನಪಿಸಿಕೊಳ್ಳಬೇಕು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ನೆನಪಿಗಾಗಿ, ಮಹಾತ್ಮ ಗಾಂಧೀಜಿಯವರ ನೆನಪಿಗಾಗಿ, ಡಿ. ಶಂಕರ್‌ಸಿಂಗ್ ಅವರು ಬಿ. ವಿಠಲಾಚಾರ್ ಹಾಗೂ ವಿಶ್ವನಾಥ ಶೆಟ್ಟಿ ಪಾಲುದಾರಿಕೆಯೊಂದಿಗೆ 1947ರಲ್ಲಿ 'ಮಹಾತ್ಮ' ಹೆಸರಿನಲ್ಲಿ ಚಿತ್ರನಿರ್ಮಾಣ ಸಂಸ್ಥೆ ಆರಂಭಿಸಿದರು. ಅದಕ್ಕೆ ಮುನ್ನ ಅರಸೀಕೆರೆಯಲ್ಲಿ ಅವರು ನಡೆಸುತ್ತಿದ್ದ ಎರಡು ಸಂಚಾರಿ ಚಿತ್ರಮಂದಿರಗಳಲ್ಲಿ ಒಂದನ್ನು 'ಮಹಾತ್ಮ' ಎಂದು ಹೆಸರಿಸಿದ್ದರು. ಮತ್ತೊಂದು ಸಂಚಾರಿ ಚಿತ್ರಮಂದಿರದ ಹೆಸರು 'ಜವಾಹರ್'. ಹೀಗೆ ಮಹಾತ್ಮನ ಬಗ್ಗೆ ಅಪಾರ ಗೌರವದ ಪ್ರತೀಕವಾಗಿ ರೂಪುಗೊಂಡ ಚಿತ್ರಸಂಸ್ಥೆ ಕೂಡ ಗಾಂಧಿಯನ್ನು ಕುರಿತಂತೆ ಒಂದು ಚಿತ್ರವನ್ನೂ ನಿರ್ಮಿಸಲಿಲ್ಲ.

ವಿನೋಬಾ ಭಾವೆ ಅವರ ಭೂದಾನ ಚಳವಳಿಯ ಹಿನ್ನೆಲೆಯಲ್ಲಿ ರೂಪುಗೊಂಡ ('ಚೋಮನದುಡಿ' ಕಥೆಯ ಇನ್ನೊಂದು ಆವೃತ್ತಿಯಂತೆ ಕಾಣಿಸುವ) 'ಭೂದಾನ' (1962) ಗಾಂಧಿಯ ಬಿಂಬ ಹೊಂದಿರುವ ಚಿತ್ರಗಳ ಸಾಲಿಗೆ ಸೇರಿಸಬಹುದಾದ ಪ್ರಯತ್ನ. ಇಲ್ಲಿ ಗಾಂಧಿ ಎನ್ನುವುದಕ್ಕಿಂತಲೂ ಗಾಂಧಿ ಅವರ ಅನುಯಾಯಿಯಾದ ವಿನೋಬಾ ಭಾವೆ ಅವರ ಬಿಂಬವೇ ಮುಖ್ಯವಾಗಿದೆ. ಶ್ರೀಮಂತ ಜಮೀನ್ದಾರನ ಬಳಿ ದುಡಿಯುವ ದಾಸಣ್ಣ ಎನ್ನುವ ರೈತ ತನ್ನದೇ ಆದ ತುಂಡು ಭೂಮಿಯನ್ನು ಹೊಂದುವ ಆಸೆ ಹೊಂದಿರುವುದು ಚಿತ್ರದ ಕಥೆ. ಭೂದಾನ ಚಳವಳಿಯ ಕಾರ್ಯಕರ್ತರು ಜಮೀನ್ದಾರನಿಂದ ಭೂಮಿಯನ್ನು ಪಡೆದು ಅದನ್ನು ದಾಸಣ್ಣನಿಗೆ ನೀಡುತ್ತಾರೆ. ಆ ಭೂಮಿಯಲ್ಲಿ ದಾಸಣ್ಣ ಬೆಳೆ ಬೆಳೆದಾಗ ಅಸೂಯೆಗೊಳಗಾಗುವ ಜಮೀನ್ದಾರ ದಾನದ ಭೂಮಿಯನ್ನು ವಾಪಸ್ಸು ಪಡೆಯುತ್ತಾನೆ. ತನ್ನ ಕನಸು ಭಗ್ನಗೊಂಡು ದಾಸಣ್ಣ ಹುಚ್ಚನಾಗುತ್ತಾನೆ. ಅಪ್ಪನ ಕೈಗೂಡದ ಆಸೆಯನ್ನು ಈಡೇರಿಸಿಕೊಳ್ಳುವ ಹಂಬಲದಲ್ಲಿ ದಾಸಣ್ಣನ ಮಕ್ಕಳು ಮತಾಂತರಗೊಳ್ಳುತ್ತಾರೆ. ಜಿ.ವಿ. ಅಯ್ಯರ್ ನಿರ್ದೇಶನದ ಈ ಸಿನಿಮಾದಲ್ಲಿ ರಾಜ್‌ಕುಮಾರ್ ದಾಸಣ್ಣನಾಗಿ, ಉದಯ್‌ಕುಮಾರ್ ಹಾಗೂ ಕಲ್ಯಾಣ್‌ಕುಮಾರ್ ಮಕ್ಕಳಾಗಿ ನಟಿಸಿದ್ದರು. 'ರಾಜ್‌ತ್ರಯ'ರು ಒಟ್ಟಾಗಿ ನಟಿಸಿದ್ದ ಏಕೈಕ ಚಿತ್ರವೆನ್ನುವುದು ಇದರ ವಿಶೇಷ.

ರಾಜ್‌ಕುಮಾರ್, ಕಲ್ಪನಾ ಮುಖ್ಯಪಾತ್ರಗಳಲ್ಲಿರುವ 'ಗಾಂಧಿನಗರ' (1968) ಕೆ.ಎಸ್.ಎಲ್. ಸ್ವಾಮಿ ನಿರ್ದೇಶನದ ಸಿನಿಮಾ. ಗಾಂಧಿನಗರ ಎನ್ನುವುದು ಒಂದು ವಸತಿ ಸಂಕೀರ್ಣ. ಶೇಖರ್